# ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಅಂಕೋಲಾ

**ಸಿಸಿ ನಂಬರ 68/2024**

ಆರೋಪಿಯ ಹೆಸರುಃ ಕುಮಾರ
ತಂದೆಯ ಹೆಸರುಃ ಬೀರಪ್ಪ ನಾಯ್ಕ
ವಯಸ್ಸುಃ 35
ಉದ್ಯೋಗಃ ಎನ್ ಡಬ್ಲ್ಯೂ ಕೆಆರ್ ಟಿ ಸಿ ಕಂಡಕ್ಟರ್
ವಿಳಾಸಃ ಸಾಃ ಕೆಳಗಿನ ಪಾಳ್ಯ, ಚರ್ಚ ರಸ್ತೆ,
ಹೊನ್ನಾವರ

## ಪ್ರಕ್ರಿಯಾ ಸಂಹಿತೆ ಕಲಂ 313 ರೀತ್ಯಾ ಆರೋಪಿಯ ಹೇಳಿಕೆ

ಪ್ರ 1: ನೀವು ಅಭಿಯೋಜನೆಯ ಪರ ಹಾಜರುಪಡಿಸಿರುವ ಸಾಕ್ಷಿಗಳ ಹೇಳಿಕೆ ಕೇಳಿದ್ದೀರಾ?
ಉತ್ತರಃ

ಪ್ರ 2ಃ ಫಿರ್ಯಾದಿ ಸೇಂಟ್ ಮಿಲ್ಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ಲಿ., ಕಾರವಾರ, ಶಾಖೆಃ ಆವರ್ಸಾ , ಇದರ ಸೀನಿಯರ್ ಅಸಿಸ್ಟೆಂಟ್ ಪಿಡಬ್ಲ್ಯೂ 1- ಪ್ರಶಾಂತ ರೂವಾ ನಾಯ್ಕ ಇವರು ತಮ್ಮ ಸಾಕ್ಷಿಯಲ್ಲಿ ಗುರುನಾಥ ಮಂಜುನಾಥ ನಾಯ್ಕ ಇವರು ದಿನಾಂಕಃ 17-07-2020 ರಂದು ಫಿರ್ಯಾದಿ ಸಂಸ್ಥೆಯಿಂದ ರೂ. 2,50,000/- ಸಾಲವನ್ನು ಪಡೆದಿದ್ದು ಇರುತ್ತದೆ. ಆರೋಪಿತನು ವ ಆತನ ಜಾಮಿನುದಾರರು ಒಪ್ಪಿ ಎಲ್ಲಾ ಸಾಲ ಪತ್ರಗಳಿಗೆ ಮತ್ತು ಕರಾರಿಗೆ ಮತ್ತು ಜಾಮೀನು ಪತ್ರಕ್ಕೆ ಸಹಿ ಮಾಡಿಕೊಟ್ಟಿರುತ್ತಾರೆ. ಸದರಿ ಸಾಲದ ಕರಾರುಗಳ ಪ್ರಕಾರ ಆರೋಪಿತನು ಸಾಲದ ಹಣವನ್ನು ಮರುಪಾವತಿ ಮಾಡಿಸುವಷ್ಟು ಹಣ ಇದೆ ಎಂದು ನಂಬಿಸಿ ರೂ.2,20,577/- ಹಣ ತುಂಬುವುದು ಬಾಕಿ ಇದ್ದಾಗ, ಆರೋಪಿತನು ದಿನಾಂಕಃ 25-10-2023 ರಂದು ತಾನು ಅಂಕೋಲಾ ಅರ್ಬನ್ ಕೋ-ಅಪರೇಟಿವ್ ಬ್ಯಾಂಕ್ ,

ಶಾಖೆಃ ಆವರ್ಸಾ ರವರಲ್ಲಿ ಹಣದ ಉಳಿತಾಯ ಖಾತೆ ಅಡಿಯಲ್ಲಿ ಚೆಕ್ ನಂಬರ 596738 ನ್ನು ರೂ.2,20,577/- ಕ್ಕೆ ನೀಡಿರುತ್ತಾನೆ . ಸದರಿ ಆರೋಪಿತನು ನೀಡಿದ ಚೆಕ್ಕು ಖಾತೆಯಲ್ಲಿ **"Funds Insufficient"** ಎಂದು ಹಿಂಬರಹದೊಂದಿಗೆ ಪರತ್ ಬಂದಿರುತ್ತದೆ. ಈ ಕುರಿತಾಗಿ ಆರೋಪಿತನಿಗೆ ಮುಂಚಿತವಾಗಿ ನೋಟೀಸು ನೀಡಿದರೂ ಸಹ ಹಣ ಮರು ಪಾವತಿಸದೇ ಎನ್ ಐ ಆ್ಯಕ್ಟ್ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರ 3ಃ ಈ ಪ್ರಕರಣದಲ್ಲಿ ಮತ್ತೇನಾದರೂ ಹೇಳುವುದಿದೆಯಾ?

ಉತ್ತರಃ

ಪ್ರ 4ಃ ನಿಮ್ಮ ಪರವಾಗಿ ಸಾಕ್ಷಿ ಮಾಡಿಸುತ್ತೀರಾ ಹಾಗೂ ಏನಾದರೂ ಕಾಗದ ಪತ್ರವನ್ನು ಹಾಜರುಪಡಿಸುತ್ತೀರಾ ?

ಉತ್ತರಃ

( ಆರೋಪಿತನಿಗೆ ಮೇಲಿನ ಪ್ರಶ್ನೆಗಳನ್ನು ಆತನಿಗೆ ತಿಳಿಯುವ ಭಾಷೆಯಲ್ಲಿ ವಿವರಿಸಲಾಗಿ ಅವರು ಕೊಟ್ಟಿರುವ ಉತ್ತರವನ್ನೇ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು.)

Sd/-

ದಿನಾಂಕಃ 21/07/2025. **( ಅರ್ಪಿತಾ ಬಿ. ಬೆಲ್ಲದ)**

**ಪ್ರ ದ ನ್ಯಾದಂ, ಅಂಕೋಲಾ.**